C.R.P.67

Form No.4 (Civil)
Deposition Sheets
(R.P.No.57)

2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.

ಎಸ್.ಸಿ. ಸಂಖ್ಯೆಃ **113/2022**

ಪ್ರಾಸಾ. **06** ಚಾಸಾ. **06**

ಸಾಕ್ಷಿದಾರರ ಹೆಸರು	ಸೋಮಣ್ಣ
ತಂದೆಯ ಹೆಸರು	ಮಹದೇವಪ್ಪ
ವಯಸ್ಸು	**50** ವರ್ಷಗಳು
ಉದ್ಯೋಗ	ವ್ಯವಸಾಯ
ವಾಸ	ಅವ್ವೇರಹಳ್ಳಿ

ಸಾಕ್ಷಿಯನ್ನು ದಿನಾಂಕಃ **24.07.2026** ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ-2 ನನ್ನ ತಂಗಿ, ಚಾಸಾ-1 ಚಾಸಾ-2 ರವರ ಗಂಡ,ಚಾಸಾ-3 ಚಾಸಾ-2 ರವರ ಮಗ, ಚಾಸಾ-4, 5, 7 ರಿಂದ 9 ಗೊತ್ತು. ಚಾಸಾ-7 ಈತನು ಚಾಸಾ-1 ರವರ ತಮ್ಮ. ಚಾಸಾ-8 ಮತ್ತು 9 ಪಕ್ಕದ ಗ್ರಾಮದವರು. ಮೃತ ಸಂಧ್ಯಾ ಈಕೆಯು ಚಾಸಾ-1 ಮತ್ತು 2 ರವರ ಮಗಳು. 1ನೇ ಆರೋಪಿಯು ಮೃತ ಸಂಧ್ಯಾಳ ಗಂಡ.

2. ಮಲ್ಲೇಶ, ನಾಗರಾಜು, ಗೌಡರ ನಾಗರಾಜು, ಮಹದೇವಯ್ಯ ಇವರು 1ನೇ ಆರೊಪಿಯ ಮತ್ತು ಸಂಧ್ಯಾ ಇವರ ಮದುವೆಯ ಮಾತುಕತೆಯಲ್ಲಿ ಭಾಗವಹಿಸಿದ್ದರು. ನನ್ನ ತಂಗಿಯ ಮನೆಯಲ್ಲಿ ಮಾತುಕತೆಯಾಗಿದೆ. ಮಾತುಕತೆಯಲ್ಲಿ ಮದುವೆ ಮಾಡಿಕೊಡಲು ಮಾತ್ರ ಮಾತುಕತೆಯಾಗಿದೆ, ಬೇರೆ ಮಾತುಕತೆ ಆಗಿಲ್ಲ. ಅವರ ಮದುವೆ ಹಾರೋಹಳ್ಳಿಯಲ್ಲಿ ಆಯಿತು.

3. ಮದುವೆಯಾದ ನಂತರ ಮೃತ ಸಂಧ್ಯಾ ಗಂಡನ ಮನೆಯಲ್ಲಿದ್ದಳು. ಮೃತ ಸಂಧ್ಯಾಳನ್ನು ಚಾಸಾ-1 ಮತ್ತು 2 ಕರೆದುಕೊಂಡು ಬಂದಿದ್ದರು. ಒಂದು ದಿನ 1ನೇ ಆರೋಪಿ ಚಾಸಾ-1 ರವರ ಮನಗೆ ಬಂದು ತನ್ನ ಹೆಂಡತಿ ಸಂಧ್ಯಾಳನ್ನು ದೇವಾಸ್ಥಾನಕ್ಕೆ ಕರೆದುಕೊಂಡು ಹೋಗುವುದಾಗಿ ಹೇಳಿ ದೇವಸ್ಥಾನದ ಹತ್ತಿರ ನೀರಿನಲ್ಲಿ ಮುಳುಗಿಸಿರುತ್ತಾನೆ.

4. ನಂತರ ಚಾಸಾ-1 ರವರಿಂದ ನನಗೆ ಈ ವಿಚಾರ ತಿಳಿಯಿತು. ಮೃತ ಸಂಧ್ಯಾ ಮತ್ತು 1ನೇ ಆರೋಪಿಯ ಸಂಸಾರ ಯಾವ ರೀತಿ ಇತ್ತು ಎಂದು ನನಗೆ ಗೊತ್ತಿಲ್ಲ. ಮೃತ ಸಂಧ್ಯಾ ನನ್ನ ಹತ್ತಿರ ಯಾವುದೇ ವಿಷಯ ಹೇಳಿಲ್ಲ. ಮೃತ ಸಂಧ್ಯಾ ಗಂಡನ ಮನೆಯಲ್ಲಿದ್ದಾಗ ನಾನು ಎರಡು ಬಾರಿ ಆಕೆಯನ್ನು ನೋಡಲು ಹೋಗಿದ್ದೆನು, ಆಗ ಆಕೆ ಏನೂ ಹೇಳಿಲ್ಲ.

5. ಮೃತ ಸಂಧ್ಯಾ ಮೃತಪಟ್ಟ ಮೂರು ದಿನಗಳ ನಂತರ ನನಗೆ ವಿಷಯ ತಿಳಿಯಿತು, ನಾನು ಆಕೆಯ ಶವ ನೋಡಿಲ್ಲ. ಮೃತ ಸಂಧ್ಯಾಳ ಸಾವಿನ ಬಗ್ಗೆ ಪೊಲೀಸರು ನನ್ನ ವಿಚಾರಣೆ ಮಾಡಿದ್ದಾರೆ. ಈಗ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಷಯ ಬಿಟ್ಟು ಪೊಲೀಸರ ಮುಂದೆ ಬೇರೆ ಏನೂ ಹೇಳಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>

ಮದುವೆಯ ಮಾತುಕತೆಯಲ್ಲಿ ಆರೋಪಿತರು ಒಂದು ಲಕ್ಷ ಹಣ ಮತ್ತು ಒಂದು ಚಿನ್ನದ ಉಂಗುರ ಕೇಳಿದರು, ಆದರೆ ಚಾಸಾ-1 ಮತ್ತು 2 ಎಂಭತ್ತು ಸಾವಿರ ಹಣ ಮತ್ತು ಒಂದು ಚಿನ್ನದ ಉಂಗುರವನ್ನು ವರದಕ್ಷಿಣೆಯಾಗಿ ಕೊಡುವುದಾಗಿ ಒಪ್ಪಿದರು ಎನ್ನುವುದು ನಿಜ. ಮದುವೆಗೂ ಮೊದಲೇ ಚಿನ್ನದ ಉಂಗುರ ಕೊಟ್ಟಿದ್ದರು ಮತ್ತು ದಿನಾಂಕಃ**10.06.2020** ರಂದು ಮದುವೆಗೆ ಒಂದು ವಾರ ಇದ್ದಾಗ ನಾನು ಮತ್ತು ಚಾಸಾ-1 ಆರೋಪಿತರ

ಮನೆಗೆ ಹೋಗಿ 1ನೇ ಆರೋಪಿಗೆ ಎಂಭತ್ತು ಸಾವಿರ ಹಣ ಕೊಟ್ಟು ಬಂದೆವು ಎನ್ನುವುದು ನಿಜ.

2. ಮದುವೆಯಾದ ಒಂದು ತಿಂಗಳ ನಂತರ 1ನೇ ಆರೋಪಿ ಕೇಳಿದ ಪ್ರಕಾರ ವರದಕ್ಷಿಣೆ ಹಣ ಕೊಟ್ಟಿಲ್ಲ ಎಂದು ಜಗಳ ಮಾಡುತ್ತಿದ್ದನು ಎನ್ನುವುದು ನನಗೆ ಗೊತ್ತಿಲ್ಲ. ನಂತರ ಚಾಸಾ-1 ಒಂದು ಬಾರಿ ಇಪ್ಪತ್ತೈದು ಸಾವಿರ, ಒಂದು ಬಾರಿ ಇಪ್ಪತ್ತು ಸಾವಿರು, ಒಂದು ಬಾರಿ ಮೂವತ್ತು ಸಾವಿರ ಹಣವನ್ನು ಚಾಸಾ-3 ರವರಿಂದ ಮೃತ ಸಂಧ್ಯಾಳ ಕೈಯಲ್ಲಿ ಹಣವನ್ನು ಕೊಡಿಸಿ ಕಳುಹಿಸಿದ್ದರು ಎನ್ನುವುದು ನಿಜ.

3. ನಂತರ 1ನೇ ಆರೋಪಿಯು ಹೆಚ್ಚಿನ ವರದಕ್ಷಿಣೆ ಕೇಳಿ ಕಿರುಕುಳ ಕೊಡುತ್ತಿಳದ್ದನು ಎಂದು ಚಾಸಾ-2 ರವರ ಮುಂದೆ ಮೃತ ಸಂಧ್ಯಾ ಹೇಳುತ್ತಿದ್ದಳು ಎನ್ನುವುದು ನಿಜ. ಈ ವಿಷಯ ನನಗೆ ಗೊತ್ತಾಯಿತು ಎನ್ನುವುದು ನಿಜ.

4. ದಿನಾಂಕಃ16.11.2020 ರಂದು ಚಾಸಾ-1 ರವರ ಮನೆಯಿಂದ ಕಂಪ್ಯೂಟರ್ ಕ್ಲಾಸಿಗೆ ಹೋಗುವುದಾಗಿ ಹೇಳಿ ಹೋದ ಮೃತ ಸಂಧ್ಯಾ ಮನೆಗೆ ಬಂದಿರಲಿಲ್ಲ ಮತ್ತು ಈ ಬಗ್ಗೆ ನನ್ನನ್ನು ವಿಚಾರಿಸಿದರು ಎನ್ನುವುದು ನಿಜ. ನಂತರ ಈ ಬಗ್ಗೆ ಚಾಸಾ-1 ರವರ ಪೊಲೀಸರಿಗೆ ದೂರು ಕೊಟ್ಟಿದ್ದರು ಎನ್ನುವುದು ನಿಜ. 1ನೇ ಆರೋಪಿ ಮೃತ ಸಂಧ್ಯಾಳನ್ನು ಕರೆದುಕೊಂಡು ಹೋಗಿ ಕೊಲೆ ಮಾಡಿರುತ್ತಾನೆ ಎಂದು ಗೊತ್ತಾಯಿತು ಎನ್ನುವುದು ನಿಜ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎನ್ನುವುದು ನಿಜ.

<u>ಆರೋಪಿತರ ಪರ ವಕೀಲರಿಂದ ಪಾಟೀ ಸವಾಲುಃ-</u>

ನಾನು ಒಂಭತ್ತನೇ ತರಗತಿವರೆಗೆ ಓದಿರುತ್ತೇನೆ. ಚಸಾ-2 ಮಂಗಳಮ್ಮ ನನ್ನ ತಂಗಿ. 1ನೇ ಆರೋಪಿಯ ಮನಗೆ ನಾನು ಹೋಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಹೋದಾಗ 1ನೇ ಆರೋಪಿ ಚೆನ್ನಾಗಿದ್ದನು ಎನ್ನುವುದು ನಿಜ. ನಾನು 1 ಮತ್ತು 2ನೇ ಆರೋಪಿತರ ಕಷ್ಟ ಸುಖ ವಿಚಾರಿಸಿಲ್ಲ

ಎನ್ನುವುದು ನಿಜ. ಆರೋಪಿತರ ಮನೆಯ ಹಣಕಾಸಿನ ವಿಷಯ ನನಗೆ ಗೊತ್ತಿಲ್ಲ.

2. 1ನೇ ಆರೋಪಿಯ ಮದುವೆಯ ಮೊದಲು ನಿಶ್ಚಿತಾರ್ಥ ಆಗಿತ್ತು ಎನ್ನುವುದು ನಿಜ. ಅದಕ್ಕಿಂತ ಮೊದಲು ಒಂದು ವರ್ಷದ ಹಿಂದೆ ನಿಶ್ಚಿತಾರ್ಥ ಆಗಿತ್ತು ಆದರೆ ಆ ಮದುವೆ ಆಗಲಿಲ್ಲ, ಸಂಧ್ಯಾ ಒಪ್ಪದೇ ಇರುವುದರಿಂದ ಆ ಮದುವೆ ಆಗಲಿಲ್ಲ. ಯಾವ ಕಾರಣಕ್ಕೆ ಆಕೆ ಒಪ್ಪಲಿಲ್ಲ ಎಂದು ನನಗೆ ಗೊತ್ತಿಲ್ಲ.

3. ಮೃತ ಸಂಧ್ಯಾ ದ್ವಿತೀಯ ಪಿಯುಸಿ ಓದಿದ್ದಳು ಮತ್ತು ಕಂಪ್ಯೂಟರ್ ಕ್ಲಾಸಿಗೆ ಹೋಗುತ್ತಿದ್ದಳು. ಮದುವೆಯಾದಾಗ ಮೃತ ಸಂಧ್ಯಾಳಿಗೆ 21 ವರ್ಷ ವಯಸ್ಸಾಗಿತ್ತು. ವಿದ್ಯಾಭ್ಯಾಸ ಮಾಡುವುದನ್ನು ಬಿಟ್ಟು ಒಂದು ವರ್ಷದ ನಂತರ ಆಕೆಯ ಮದುವೆಯಾಗಿತ್ತು. ಆಕೆಯು ಓದಲು ಆಗುವುದಿಲ್ಲ ಎನ್ನುವ ಕಾರಣದಿದಂದ ಕಾಲೆಜು ಬಿಟ್ಟಿದ್ದಾಳೆ, ಆಕೆ ಮಳವಳ್ಳಿಯಲ್ಲಿ ಪಿ.ಯು.ಸಿ. ಓದಿದ್ದಾಳೆ, ಆಕೆ ಕೊಳ್ಳೇಗಾಲದಲ್ಲಿ ಓದುತ್ತಿರಲಿಲ್ಲ.

4. 1ನೇ ಆರೋಪಿಯೊಂದಿಗೆ 2ನೇ ನಿಶ್ಚಿತಾರ್ಥವಾದ ನಂತರ 1ನೇ ಆರೋಪಿಯನ್ನು ಮದುವೆಯಾಗಲು ಮೃತ ಸಂಧ್ಯಾಳಿಗೆ ಇಷ್ಟವಿತ್ತು. ಚಾಸಾ-1 ರವರ ಹಣಕಾಸಿನ ವಿಚಾರ ನನಗೆ ಗೊತ್ತಿಲ್ಲ. ಚಾಸಾ-1 ರವರ ಆದಾಯ ಮತ್ತು ಖರ್ಚಿನ ಬಗ್ಗೆ ನಾನು ಕೇಳಿಲ್ಲ. ಎಂಭತ್ತು ಸಾವಿರ ಹಣವನ್ನು ಯಾವುದೋ ಸಂಘದಿಂದ ತೆಗೆದುಕೊಂಡು ಬಂದು ಕೊಟ್ಟಿದ್ದರು. ಚಾಸಾ-1 ಕುಟುಂಬ ನಿರ್ವಹಣೆ ಮಾಡುವುದೇ ಕಷ್ಟ ಎನ್ನುವುದು ನಿಜ.

5. ಮದುವೆ ಮಾತುಕತೆಯಲ್ಲಿ ಆರೋಪಿ ಊರಿನವರು ಅಂದರೆ ರುದ್ರಪ್ಪ, ರಾಜಪ್ಪ, ರವಿ ಮತ್ತು ಇತರರು ಇದ್ದರು. ಸದರಿ ಮನೆಯ ಸಮಯದಲ್ಲಿ ಕರೋನಾ ಇತ್ತು ಎಂದರೆ ಸರಿ. ಆರೋಪಿತರೇ ಮದುವೆ ಮಾಡಿಕೊಂಡಿದ್ದಾರೆ ಎನ್ನುವುದು ನಿಜ. ಚಾಸಾ-1 ಮತ್ತು 2 ರವರಿಗೆ ಮದುವೆ ಮಾಡುವ ಚೈತನ್ಯ ಇಲ್ಲವಾದ್ದರಿಂದ ಆರೋಪಿತರಿಗೆ ಮದುವೆ ಮಾಡಿಕೊಳ್ಳಲು

ಕೇಳಿದರು ಎಂದರೆ ನಿಜ. ನನ್ನ ಸಮಕ್ಷಮ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎನ್ನುವುದು ನಿಜ.

6. ಮೃತ ಸಂಧ್ಯಾ ಯಾವ ಕಾರಣಕ್ಕಾಗಿ ಮೃತಪಟ್ಟಳು ಎಂದು ಸ್ವತಃ ಮಾಹಿತಿ ಇಲ್ಲ ಎನ್ನುವುದು ನಿಜ. ಶವ ನೋಡುವುದನ್ನು ಬಿಟ್ಟು ಬೇರೆ ವಿಷಯ ನನಗೆ ಗೊತ್ತಿಲ್ಲ. ಆರೋಪಿತರ ಮತ್ತು ಚಾಸಾ-1 ರವರ ಮನೆಂ ವಿಷಯ ತಿಳಿದುಕೊಳ್ಳುವ ಪ್ರಮೇಯ ನನಗೆ ಬಂದಿಲ್ಲ ಎನ್ನುವುದು ನಿಜ. ಚಾಸಾ-1 ಏನು ದಾರು ಕೊಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ಕೊಟ್ಟಿಲ್ಲ. ಮೃತ ಸಂಧ್ಯಾ ಈಕೆ ಮೃತಪಟ್ಟ ವಿಷಯದ ಬಗ್ಗೆ ಈಗಲೇ ಮೊದಲನೇ ಬಾರಿ ನಾನು ಹೇಳುತ್ತಿದ್ದೇನೆ ಎನ್ನುವುದು ನಿಜ. ನನಗೆ ಈ ಕೇಸಿನ ಸಂಪೂರ್ಣ ವಿಷಯ ಗೊತ್ತಿಲ್ಲ ಎನ್ನುವುದು ನಿಜ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ.

(ಹತ್ತಿಕಾಳ ಪ್ರಭು ಎಸ್)
2ನೇ ಅಪರ ಜಿಲ್ಲಾ ಮತ್ತು
ಸತ್ರ ನ್ಯಾಯಾಧೀಶರು, ಮಂಡ್ಯ.